

ಸ್ಥಾಪನೆಗೆ ಸರ್ಕಾರ ಉದ್ದೇಶಿಸಿದೆ. ಮಧ್ಯಪ್ರದೇಶದ ಅಮರಕಂಟಕದಲ್ಲಿ ಇರುವ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಮಾದರಿಯಲ್ಲಿ ರಾಜ್ಯ ಸರ್ಕಾರವೊಂದು ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆಗೆ ಮುಂದಾಗಿರುವುದು ಇದೇ ಮೊದಲು. ಕನ್ನಡಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಇರುವಂತೆ ಬುಡಕಟ್ಟು ಸಂಸ್ಕೃತಿಯ ಅಧ್ಯಯನ, ಸಂಶೋಧನೆ, ಬುಡಕಟ್ಟು ಸಮುದಾಯದವರಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವುದು ಈ ವಿಶ್ವವಿದ್ಯಾಲಯದ ಘನ ಉದ್ದೇಶವಾಗಿದೆ.

ಕನ್ನಡದಷ್ಟೇ ಹಿರಿಯದಾದ ತುಳು ಭಾಷೆಗೆ ಸಾಂವಿಧಾನಿಕ ಮಾನ್ಯತೆ ನೀಡಲು ಕೇಂದ್ರಕ್ಕೆ ಶಿಫಾರಸು ಮಾಡುವುದು, ಈ ಹಿಂದೆ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ  ಪ್ರಾಕೃತ ಮತ್ತು ಪಾಲಿ ಭಾಷೆ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಲು ನೀತಿ ಶಿಫಾರಸು ಮಾಡಿತ್ತು. ಅದನ್ನು ಸರ್ಕಾರ ಒಪ್ಪಿಕೊಂಡಿದ್ದು ಅನುಷ್ಠಾನಕ್ಕೆ ಮುಂದಾಗಿದೆ.

ಕನ್ನಡಕ್ಕೆ ತತ್ವಪದಕಾರರ, ವಾಗ್ಗೇಯಕಾರರ ಕೊಡುಗೆ ಅತ್ಯಂತ ದೊಡ್ಡದು. ಆಡುಗನ್ನಡದಲ್ಲಿ ಜ್ಞಾನವನ್ನು ಹಂಚುತ್ತಲೇ, ಬದುಕಿಗೆ ಸನ್ಮಾರ್ಗವನ್ನು ತೋರಿದ ಮಹನೀಯರ ಸಂಖ್ಯೆ ನೂರಾರು. ತತ್ವಪದಕಾರರು ಮತ್ತು ಸೂಫಿ ಸಂತರ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಲು ಸಂಶೋಧನಾ ಕೇಂದ್ರ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ.

## ಕನ್ನಡದ ಕಣಜ

ಕನ್ನಡದ ಜ್ಞಾನ ಸಂಪತ್ತು ಹಾಗೂ ಸಾಹಿತ್ಯವನ್ನು ಅಂತರ್ಜಾಲ ತಾಣದಲ್ಲಿ ನೀಡಿ, ಅದಕ್ಕೆ ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡಲು ಕರ್ನಾಟಕ ಜ್ಞಾನ ಆಯೋಗವು ಅಂತರ್ಜಾಲ ತಾಣ ಅಭಿವೃದ್ಧಿ ಪಡಿಸುವಂತೆ ಸೂಚಿಸಿತ್ತು.

ನಾಲ್ಕೈದು ವರ್ಷಗಳ ಹಿಂದೆಯೇ 'ಕಣಜ' ಎಂಬ ಅಂತರ್ಜಾಲ ತಾಣ ಆರಂಭವಾದರೂ ಅದು ಇ–ಆಡಳಿತ ಇಲಾಖೆಯ ಹಿಡಿತದಲ್ಲಿತ್ತು. ಆರಕ್ಕೇರದೇ ಮೂರಕ್ಕೆ ಇಳಿಯದಂತೆ ಇದ್ದ ಕಣಜವನ್ನು ಇತ್ತೀಚಿನ ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೋಡಿಕೊಳ್ಳಲು ಆರಂಭಿಸಿತು. ಇದೀಗ ದವಸ, ಧಾನ್ಯ ತುಂಬಿದ, ಕನ್ನಡ ನುಡಿಬೆಡಗನ್ನು, ವೈವಿಧ್ಯವನ್ನು ಜಗತ್ತಿಗೆ ಪರಿಚಯಿಸುವ ಮಟ್ಟಕ್ಕೆ 'ಕಣಜ' ಜೀವಾಂತರ ಹಾಗೂ ರೂಪಾಂತರಗೊಂಡಿದೆ ಎಂದರೆ ಅಚ್ಚರಿಯಲ್ಲ.

ಕೇವಲ ಸಾಹಿತ್ಯ, ಸಂಸ್ಕೃತಿಯ ವಿಷಯಕ್ಕೆ ಸೀಮಿತವಾಗಿದ್ದ ಕಣಜದ ಆಳ–ಅಗಲದ ವ್ಯಾಪ್ತಿ ಈಗ ಹಿಗ್ಗಿದೆ. ಕನ್ನಡದ ಜ್ಞಾನಕೋಶವಾಗಿ ಪರಿವರ್ತಿತವಾಗಿದೆ. ಗ್ರಂಥಾಲಯವೂ, ಮಾಹಿತಿ ಕಣಜವೂ ಆಗಿದೆ. ಯೂನಿಕೋಡ್ ಶಿಷ್ಟತೆಯಲ್ಲಿ ಕನ್ನಡದ 700 ಕ್ಕೂ ಹೆಚ್ಚು ಪುಸ್ತಕಗಳು ಇಲ್ಲಿ ಓದಲು ಲಭ್ಯ. ಅದನ್ನು ಉಚಿತವಾಗಿ ಡೌನ್ ಲೋಡ್ ಮಾಡಿಕೊಳ್ಳುವ ಅವಕಾಶವನ್ನೂ ನೀಡಲಾಗಿದೆ. ಪುಸ್ತಕ ಹಿಡಿದು ಓದುವ, ವೆಬ್ ಸೈಟ್ನಲ್ಲಿ ಕುಳಿತು ಡೌನ್ ಲೋಡ್ ಮಾಡಿಕೊಳ್ಳುವ ವ್ಯವಧಾನ ಇಂದಿನ ತಲೆಮಾರಿಗೆ ಇಲ್ಲ. ಅವರದೇನಿದ್ದರೂ ಕಿಂಡ್ಲ್  ಕೈಯಲ್ಲಿಡಿದು ಓದುವುದು. ಯೂನಿಕೋಡ್‌ನಲ್ಲಿ  ಇವುಗಳನ್ನು ಅಪ್ಲೋಡ್ ಮಾಡಿರುವುದರಿಂದ ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತಾದರೂ ಓದಬಹುದು.

ಇದರಲ್ಲಿ ತಮ್ಮ ಮೆಚ್ಚಿನ ಸಾಹಿತಿಗಳ ಧ್ವನಿಯನ್ನು ಆಲಿಸುವ ಇ–ದನಿಯನ್ನು ಆರಂಭಿಸಲಾಗಿದೆ. ಕನ್ನಡ ನಾಡು–ನುಡಿ ಪರಿಚಯಿಸುವ ಮಾಹಿತಿಗಳೂ ಇವೆ.

ಅಷ್ಟು ಮಾತ್ರವಲ್ಲದೇ ಕನ್ನಡದ ಪಠ್ಯಪುಸ್ತಕಗಳು, ಕರ್ನಾಟಕ ಸರ್ಕಾರದ ಆದೇಶಗಳು ಇಲ್ಲಿ ಸಿಗುವುದು ಮತ್ತೊಂದು ವೈಶಿಷ್ಟ್ಯ. ಇದಲ್ಲದೇ ದೃಶ್ಯಾಂಕಣ, ಚಿತ್ರಾಂಕಣಗಳು ಗಮನ ಸೆಳೆಯುತ್ತವೆ.

196 ದೇಶಗಳ ಬಗ್ಗೆ ಕನ್ನಡದಲ್ಲಿ ಮಾಹಿತಿ ಸಿಗುವುದು ಕಷ್ಟ. ಇಂಗ್ಲಿಷ್‌ನಲ್ಲಿ ಬೇಕಾದರೆ ವಿಕಿಪೀಡಿಯದಲ್ಲ ಹುಡುಕಬಹುದು. ಕಣಜವು ಆರಂಭಿಸಿರುವ ಇ–ಜಗ ಬೇರೆ ಬೇರೆ ದೇಶಗಳ ವೈಶಿಷ್ಟ್ಯ, ಜನಸಂಖ್ಯೆ, ಸಂಸ್ಕೃತಿಯ ಸಮಗ್ರ ಮಾಹಿತಿಯನ್ನು ಒಂದೇ ಕಡೆ ನೀಡುವ ಏಕೈಕ ತಾಣವಾಗಿದೆ.

